## ಪದಬಂಧ



ಎಡದಿಂದ ಬಲಕ್ಕೆ:

1. ಅಪರಿಚಿತರಿಗೂ ಅಲ್ಲಿ ಉತ್ತಮವಾದ ಸತ್ಕಾರ (4)
3. ಎಣ್ಣೆ ಹಚ್ಚಿ ನಿಂತವರಿಗೆ ಕಂಡದ್ದು ಅಳಿಲು ತಾನೇ ? (3)
4. ಅವರಿಗೆ ಲಭಿಸಿರುವ ಸಮ್ಮತಿಯ ವ್ಯಾಪ್ತಿ ಅನಂತವೇನಲ್ಲ (3)
6. ಹಳತಾದರೇನು? ಉತ್ತಮ ಅಡಿಪಾಯ ಇದ್ದರೆ ಸಾಕು (4)
7. ವಾರಾಂತ್ಯದಲ್ಲಿ ಅವರವರ ನಡುವೆಯೇ ಭಾರೀ ಗೊಂದಲ, ಗದ್ದಲ (4)
9. ಕಾಪಾಲಿಕರ ಕಲ್ಪನೆಯ ಭೂಮ್ಯೇತರ ನೆಲೆ (4)
11. ಕಾರ್ತಿಕೇಯನ ಬಗೆಗೊಂದು ಕಲ್ಪನಾ ವಿವರ (4)
13. ಸರಕಾರ ಮಂಡಿಸಿದ ತಿದ್ದುಪಡಿಗೆ ಸಿಗಲಿಲ್ಲ ಸ್ವೀಕಾರ (4)
15. ಯಾವ ವಿಧಾನದಲ್ಲೂ ಆರಿಸಲಾಗದು ಈ ಕಾಡು ಕಿಚ್ಚು (4)
17. ಸಮಯವನ್ನು ಉಳಿಸಿ ಕೊಟ್ಟದ್ದಕ್ಕೆ ಭಾರೀ ಹಿಗ್ಗು (3)
18. ವಾದ್ಯ ತರುವಂತಿಲ್ಲವೆಂಬುದು ಬರೀ ಗಾಳಿ ಸುದ್ದಿ (3)
19. ಉದ್ಯಾನವಲ್ಲ ಅದು, ಅಡವಿಯ ನೆಲೆ (4)

ಮೇಲಿಂದ ಕೆಳಕ್ಕೆ

1. ಎಂಥ ವಿಚಿತ್ರ ! ಅಲ್ಲಿ ಯಾವ ವಸ್ತುವಿಗೂ ಹಣ ನೀಡಬೇಕಿಲ್ಲ (3)
2. ದೇವರ ಸನ್ನಿಧಿಗೆ ಧನ ಅರ್ಪಿಸಿದ್ದರ ದಾಖಲೆ (3)
3. ಎಳೆತದ ತೀವ್ರತೆಯಲ್ಲಿ ಇದೀಗ ಕುಸಿತ (3)
5. ತಾತ್ಸಾರದ ತೀವ್ರತೆ ಕಂಡು ತಬ್ಬಿಬ್ಬು (3)
7. ಅಧಿಕಾರಕ್ಕೆ ಹೆದರುವವರ ಸಂಖ್ಯೆಯೇ ಹೆಚ್ಚು (3)
8. ಜನವರಿಯ ತನಕ ಆತನೊಬ್ಬನೇ ಅಗಸ (3)
9. ತಿದ್ದುಪಡಿ ಮಾಡಲೇಬೇಕೆಂಬುದು ಅಲ್ಲಿನ ಸಂಪ್ರದಾಯ (3)
10. ಕೂರ್ಮಾವತಾರ ವಿವರಿಸಿದವ ಕಬ್ಬಿಣ ಕುಟ್ಟುವವ (3)
12. ಎಲ್ಲ ಸಾಮಾನುಗಳನ್ನು ಕೊಳ್ಳುವ ಕನಸು ನಿಜವಾಯಿತು (3)
14. ರಾದ್ಧಾಂತಕ್ಕೆ ಕಾರಣವಾದ ಕಾನೂನಿನ ನಿಷೇಧ (3)
15. ವಿದ್ಯೆಯನ್ನು ಕಲಿತ ನಂತರವೂ ರಾಕ್ಷಸನೇ ಆಗಿದ್ದಾನೆ (3)
16. ಓಣಿಯಲ್ಲಿರುವ ಮೂಟೆಗಳ ತುಂಬ ಬರೀ ಉಪ್ಪು (3)

### 29-12-2016ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸಂಕಟ 3. ಬುನಾದಿ 4. ಪಾದುಕೆ 6. ಗುಸುಗುಸು 7. ಬಾಹುಬಲ 9. ಬಿಡುಗಡೆ 11. ಬಡಪಾಯಿ 15. ಕೆಡುಕ 16. ಕದರು 17. ರಮಣ

ಮೇಲಿಂದ ಕೆಳಕ್ಕೆ :

1. ಸಂದಿಗ್ಧ 2. ಟಪಾಲು 3. ಬುರುಗು 4. ಕೆಡಹು 6. ಗುಲಾಬಿ 8. ಲಡಾಯಿ 10.ಗಳಿಕೆ 12. ಡಮರು 13. ಪೆಕರ 14. ಕಂಕಣ

## ಪ್ರಶ್ನಾ ಂಕಣ

# ಕೆಲ್ಪ್: ಏನು ವಿಶೇಷ?

ಕೆಲ್ಪ್ ಅದೊಂದು ಬಗೆಯ ಸಸ್ಯ. ಕಡಲಿನ ಸಸ್ಯವಾಗಿರುವುದು ಅದರ ಮೊದಲ ವಿಶೇಷ. ಪಾಚಿ ಸಸ್ಯಗಳ ವರ್ಗಕ್ಕೇ ಸೇರಿದ್ದರೂ ನೆಲ ಸಸ್ಯಗಳಂತೆಯೇ ಕಾಣುವ, 'ಮಿಂಚಿನ ವೇಗ'ದಲ್ಲಿ ಬೆಳೆವ, ಕಡಲಲ್ಲಿ ನಿಬಿಡ ಅಡವಿಗಳನ್ನೇ ರೂಪಿಸುವ ಗುಣಗಳು ಕೂಡ ಕೆಲ್ಪ್ ನದೇ ವೈಶಿಷ್ಟ್ಯಗಳು.

ಶೈವಲಗಳಲ್ಲಿ, ಎಂದರೆ ಪಾಚಿ ಸಸ್ಯಗಳಲ್ಲಿ ಮೂರು ಪ್ರಧಾನ ವಿಧಗಳಿವೆ: 'ಹಸಿರು ಶೈವಲ, ಕೆಂಪು ಶೈವಲ ಮತ್ತು ಕಂದು ಶೈವಲ. ಈ ಪೈಕಿ ಕಂದು ಶೈವಲಗಳ ಗುಂಪಿಗೇ ಕೆಲ್ಪ್ ನ ಎಲ್ಲ ವಿಧ ಪ್ರಭೇದಗಳೂ ಸೇರಿವೆ. ತೀರಕ್ಕೆ ಸನಿಹದಲ್ಲಿ,ಆಳವಿಲ್ಲದ ಕಡಲಲ್ಲಿ, ಸ್ವಚ್ಛವಾದ ನೀರಿನಲ್ಲಿ, ಸೂರ್ಯನ ಬೆಳಕು ತಲುಪುವಷ್ಟೇ ಆಳದಲ್ಲಿ ಕೆಲ್ಪ್ ಬೆಳೆಯುತ್ತದೆ. ಬೇರಿನಂತಹ ರಚನೆ ಬಳಸಿ, ಕಡಲ ನೆಲವನ್ನು ಕಚ್ಚಿ ಹಿಡಿದು, ದಪ್ಪ ಬಳ್ಳಿಯಂತಹ ಕಾಂಡ ಪಡೆದು, ಕಾಂಡದಿಂದ ಬೆಳೆವ ಎಲೆಗಳಂತಹ ನಿರ್ಮಿತಿಗಳನ್ನು ಬಳಸಿ, ದ್ಯುತಿ ಸಂಶ್ಲೇಷಿಸಿ ಆಹಾರ ತಯಾರಿಸಿಕೊಳ್ಳುವ ಕ್ರಮ ಈ ಸಸ್ಯಗಳದು. ಪ್ರತಿ ಎಲೆಯ ಬುಡದಲ್ಲೂ ಇರುವ ಗಾಳಿ ತುಂಬಿದ ಬುರುಡೆಗಳಿಂದಾಗಿ ಕೆಲ್ಪ್ ಸಸ್ಯಗಳು ಎಷ್ಟೇ ಬೆಳೆದರೂ ನೆಲಕ್ಕೆ ಬೀಳದೆ ನೀರಲ್ಲಿ ಮೇಲ್ಮುಖನಾಗಿಯೇ ನಿಲ್ಲುತ್ತವೆ; ತೇಲಿ ನಿಂತೇ ಹರಡುತ್ತವೆ; ಒಂಬತ್ತು ಹತ್ತು ವರ್ಷ ಕಾಲ ಬದುಕುತ್ತವೆ.

ಮಹದದ್ಭುತ ಏನೆಂದರೆ ಕೆಲ್ಪ್ ಗಳದೇ ಒಂದು ಪ್ರಭೇದವಾದ 'ದೈತ್ಯ ಕೆಲ್ಪ್' ಬೆಳವಣಿಗೆಯ ವೇಗದಲ್ಲಿ ವಿಶ್ವ ದಾಖಲೆಯನ್ನೇ ಸ್ಥಾಪಿಸಿದೆ. ಈ ಸಸ್ಯ ದಿನಕ್ಕೆ 60 ಸೆಂಟಿ ಮೀಟರ್ (ಎರಡು ಅಡಿ)ಉದ್ದ ವರ್ಧಿಸುತ್ತದೆ ! ಇಂತಹ




ಪರಮ ವೇಗದ ಬೆಳವಣಿಗೆಯಿಂದಾಗಿ ಕೆಲ್ಪ್ ಗಳು ಕಡಲಲ್ಲಿ ನಿಬಿಡವಾದ, ವಿಸ್ತಾರವಾದ ಅಡವಿಗಳನ್ನೇ ರೂಪಿಸುತ್ತವೆ; ಪ್ರತಿ ಪ್ರದೇಶದಲ್ಲೂ ಸಾವಿರಾರು ಚದರ ಕಿ. ಮೀ. ವೈಶಾಲ್ಯಕ್ಕೆ ಹರಡುತ್ತವೆ.

ನೆಲದ ಮೇಲಿನ ಅಡವಿಗಳಂತೆಯೇ ಕಡಲಿನ ಕೆಲ್ಪ್ ಅಡವಿಗಳು ಕೂಡ ಬಹು ದಟ್ಟ ಜೀವಾವಾರಗಳಾಗಿವೆ. ಆಹಾರಕ್ಕೆ, ಆಶ್ರಯಕ್ಕೆ ಕೆಲ್ಪ್ ಅಡವಿಗಳನ್ನೇ ಅವಲಂಬಿಸಿರುವ ಪ್ರಾಣಿಗಳು (ಡ್ಯೂಗಾನ್, ಮ್ಯಾನೆಟೀ, ಸಮುದ್ರ ಸಿಂಹ, ಸಮುದ್ರ ನಾಯಿ, ಸೀಲ್, ತಿಮಿಂಗಿಲ ಇತ್ಯಾದಿ) ಪಕ್ಷಿಗಳು (ಗಲ್, ಟರ್ನ್, ಈಗ್ರೆಟ್, ಹೀರಾನ್ ಇತ್ಯಾದಿ), ಮತ್ಸ್ಯಗಳು ಮತ್ತು ಅಕಶೇರುಕಗಳು ಅಸಂಖ್ಯ.

ಮಾನವರಿಗೂ ಬಹು ವಿಧಗಳಲ್ಲಿ ಉಪಯುಕ್ತವಾಗಿರುವುದು ಕೆಲ್ಪ್ ಸಸ್ಯಗಳ ಮತ್ತೊಂದು ವಿಶೇಷ. ಖನಿಜಗಳು ಮತ್ತು ಜೀವಸತ್ವ ಭರಿತ ಆಹಾರವಾಗಿ, ರಸಗೊಬ್ಬರಗಳ ತಯಾರಿಗೆ ಕಚ್ಚಾ ವಸ್ತುವಾಗಿ, ಐಸ್ ಕ್ರೀಮ್, ಟೂತ್ ಪೇಸ್ಟ್ ಇತ್ಯಾದಿಗಳಲ್ಲಿ ಬೆರೆಸುವ ಆಲ್ಜಿನೇಟ್ ಗಳಿಗೆ ಆಕರವಾಗಿ ಪ್ರತಿವರ್ಷ ಹತ್ತಾರು ಲಕ್ಷ ಟನ್ ಗಳಷ್ಟು ಕೆಲ್ಪ್ ಸಸ್ಯಗಳನ್ನು ಬಳಸಲಾಗುತ್ತಿದೆ. ಅಷ್ಟೇ ಅಲ್ಲದೆ ಜೈವಿಕ ಇಂಧನದ ತಯಾರಿಕೆಗೂ ಸೂಕ್ತವಾಗಬಲ್ಲ ಸಸ್ಯವಾಗಿರುವುದು ಕೆಲ್ಪ್ ನ ಇನ್ನೊಂದು ವಿಸ್ಮಯ ವಿಶೇಷ.

■ ಎನ್. ವಾಸುದೇವ್